ಮಾಡುತ್ತಾರೆ. ನಿನ್ನ ಕ್ಯಾಮೆರಾಮ್ಯಾನ್ ಕೂಡ ಅವರಲ್ಲಿ ಒಬ್ಬ ಎಂಬುದು ತಿಳಿಯಿತು. ನಿನ್ನನ್ನು ಸುರಕ್ಷಿತ ಸ್ಥಳಕ್ಕೆ ಕರೆ ತರುವಂತೆ ನಾವು ನೇಮಿಸಿದ್ದ ಆದಿವಾಸಿ ವ್ಯಕ್ತಿಯೇ ನೀನು ದೇವಾಲಯದಲ್ಲಿ ಕಂಡ ಪುರೋಹಿತ. ಆದರೆ ಅವನು ನಮಗೆ ದ್ರೋಹ ಮಾಡಿದ. ಭಯಗೊಂಡು ನೀನು ರೈಪುರಕ್ಕೆ ಮರಳಿದ್ದೀಯೆಂದು ನಾವು ನಂಬುವಂತೆ ಮಾಡಿದ. ಆದರೆ ಅವನ ಕಥೆಯ ಬಗ್ಗೆ ಅನುಮಾನಗೊಂಡು, ನಮ್ಮ ಕಾರ್ಯಕರ್ತರು ರಾತ್ರಿ ತನಿಖೆ ನಡೆಸುತ್ತಿದ್ದಾಗ, ಅವರದೇ ಕುಲದ ಮತ್ತೊಬ್ಬ ವ್ಯಕ್ತಿ ಸತ್ಯ ಬಿಚ್ಚಿಟ್ಟ'.

'ನಾನು ಈಗ ನನ್ನ ಕ್ಯಾಮೆರಾಮ್ಯಾನ್‌ನನ್ನು ನೋಡಬಹುದೇ?' ಎಂದು ಕೇಳಿದೆ.

ಸ್ವಲ್ಪ ಮೌನದ ನಂತರ ಅವಳು, 'ಅವರು ನಗರದಿಂದ ಅನೇಕ ಹುಡುಗಿಯರನ್ನು ಅಪಹರಿಸಿದ್ದಾಗಿ ಒಪ್ಪಿಕೊಂಡರು; ಆದರೆ ತಪ್ಪನ್ನು ನಮ್ಮ ಮೇಲೆ ಹಾಕಿದರು. ಅವರಿಗೆ ತಕ್ಕ ಶಿಕ್ಷೆ ದೊರೆತಿದೆ'.

ಅಷ್ಟರಲ್ಲಿ ಹೊರಗೆ ಏನೋ ಶಬ್ದ ಕೇಳುತ್ತದೆ; ನನ್ನ ಸುತ್ತಲಿರುವ ಮಹಿಳೆಯರು ಎಚ್ಚರಗೊಂಡರು. ಒಬ್ಬಳು, 'ಮಿಸ್, ಕಮಾಂಡರ್ ಬಂದಿದ್ದಾರೆ, ಅವರನ್ನು ಭೇಟಿ ಮಾಡಲು ಸಿದ್ಧರಾಗಿ' ಎಂದಳು.

ನಾನು ಗುಡಿಸಲಿನಿಂದ ಹೊರಬಂದೆ; ಅರೆ ವೃತ್ತಾಕಾರದ ಸಾಲಿನಲ್ಲಿ ನಿಂತಿರುವ ಅನೇಕ ಸಶಸ್ತ್ರ ಪುರುಷರನ್ನು ನೋಡಿ ಬೆಚ್ಚಿಬಿದ್ದೆ. ಮಧ್ಯದಲ್ಲಿ ದೊಡ್ಡ ಬಂಡೆಯ ಮೇಲೆ ಕುಳಿತಿರುವ ಒಬ್ಬ ವ್ಯಕ್ತಿ. ಅವನು ಮಧ್ಯವಯಸ್ಕ. ತಲೆ ಬೋಳು. ಅವನ ಗಡ್ಡ ಎದೆಗೆ ತಾಕುವಷ್ಟು ಉದ್ದ. ಅವನು ಬೇರೆ ಯಾರೂ ಅಲ್ಲ, ಕಮಾಂಡರ್ ಶಂಕರ್ ಪಾಂಡೆ ಎಂಬುದನ್ನು ನಾನು ತಕ್ಷಣವೇ ಗ್ರಹಿಸಿದೆ. ಶಂಕರ್ ಪಾಂಡೆ, ನಾನು ಅವನ ಫೋಟೋಗಳನ್ನು ನೋಡಿ ಊಹಿಸಿದ್ದಷ್ಟು ಭಯಾನಕವಾಗಿ ಕಾಣಲಿಲ್ಲ.

'ನೀನು ಧೈರ್ಯಶಾಲಿ ಹುಡುಗಿ' ಎಂದು ಅವನು ನನ್ನನ್ನು ಸ್ವಾಗತಿಸಿದ.

ನಾನು ಕೈಮುಗಿದು ಪ್ರತಿಕ್ರಿಯಿಸಿದೆ. ಒಬ್ಬ, ಕಾರ್ಯಕರ್ತ ನಾಗ್ಪಾಲ್‌ನ ಕ್ಯಾಮೆರಾವನ್ನು ತಂದ. ಆದರೆ ಅದರ ಕಾರ್ಯವಿಧಾನ ಯಾರಿಗೂ ಗೊತ್ತಿಲ್ಲ.

ಕಮಾಂಡರ್ ಕೈ ಬೀಸಿದ. ಹ್ಯಾಂಡಿ ಕ್ಯಾಮ್ ಹಿಡಿದ ಇನ್ನೊಬ್ಬ ಕಾರ್ಯಕರ್ತ ಮುಂದೆ ಬಂದ, 'ಚಿಂತಿಸಬೇಡಿ, ಇದನ್ನು ನಾನು ನಿರ್ವಹಿಸಬಲ್ಲೆ'.

ಅವನು ಹ್ಯಾಂಡಿಕ್ಯಾಮ್ ಫೋಕಸ್ ಮಾಡುತ್ತಾ ಇರುವಾಗ, ನಾನು ಸಂದರ್ಶನ ಆರಂಭಿಸಿದೆ.

'ನಮಸ್ಕಾರ ವೀಕ್ಷಕರೇ, ನಾನು ಟಿವಿ24ನ ಜ್ಯೋತ್ಸ್ನಾ. ಛತ್ತೀಸ್‌ಗಢದ ಕವಾರ್ಧಾ ಅರಣ್ಯಗಳಿಂದ ನಿಮ್ಮೊಂದಿಗೆ ಮಾತನಾಡುತ್ತಿದ್ದೇನೆ. ಇತ್ತೀಚಿನ ಹತ್ಯಾಕಾಂಡದ ಹೊಣೆ ಹೊತ್ತಿರುವ ನಕ್ಸಲೈಟ್ ಗುಂಪಿನ ನಾಯಕ ಶ್ರೀ ಶಂಕರ್ ಪಾಂಡೆ ಅವರನ್ನು ನಾನು ಸಂದರ್ಶಿಸುತ್ತಿದ್ದೇನೆ'.

ನಂತರ ನಾನು ಶಂಕರ್ ಪಾಂಡೆ ಕಡೆ ತಿರುಗಿದೆ, 'ಐವತ್ತು ವರ್ಷಗಳ ನಿರಂತರ ಬಂಡಾಯ ಮತ್ತು 15,000 ಜನರ ಸಾವು – ಇದನ್ನು ನಿಲ್ಲಿಸಲು ಏನು ಬೇಕು?'

'ನಮ್ಮ ಬೇಡಿಕೆಗಳು ಈಡೇರದವರೆಗೂ ನಮ್ಮ ಹೋರಾಟ ಮುಂದುವರಿಯುತ್ತದೆ'.

ನಾನು, 'ನಿಮ್ಮ ಮುಖ್ಯ ಬೇಡಿಕೆಗಳು?' 'ಬಂಧನದಲ್ಲಿರುವ ನಮ್ಮ ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕು, ಭೂಮಿಯನ್ನು ಮರು ಹಂಚಿಕೆ ಮಾಡಬೇಕು ಮತ್ತು ಗ್ರಾಮೀಣ ಬಡವರಿಗೆ ಉದ್ಯೋಗ ಒದಗಿಸಬೇಕು'.

'ಆದರೆ, ಸರ್ಕಾರ ಈ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಈಗಾಗಲೇ ಅನೇಕ ಕ್ರಮಗಳನ್ನು ತೆಗೆದು ಕೊಂಡಿದೆಯಲ್ಲ?'.

'ದುರದೃಷ್ಟವಶಾತ್, ಭ್ರಷ್ಟ ರಾಜಕಾರಣಿಗಳಿಂದಾಗಿ ಅದರ ಪ್ರಯೋಜನ ನಮಗೆ ತಲುಪುತ್ತಿಲ್ಲ'.

ಮುಂದಿನ ಪ್ರಶ್ನೆ, 'ಆಯುಧಗಳನ್ನು ಖರೀದಿಸಲು ಮತ್ತು ಇಷ್ಟು ದೊಡ್ಡ ಮಿಲಿಷಿಯ ನಡೆಸಲು ಹಣವನ್ನು ನೀವು ಎಲ್ಲಿಂದ ಪಡೆಯುತ್ತೀರಿ?'

'ನಾನು ಮಾತು ತಿರುಚುವುದಿಲ್ಲ. ನಮ್ಮ ಭೂಮಿಯ ಸಂಪನ್ಮೂಲಗಳನ್ನು ಲೂಟಿ ಮಾಡುವವರನ್ನೇ ನಾವು ಲೂಟಿ ಮಾಡುತ್ತೇವೆ'.

'ನೀವು ಮಕ್ಕಳನ್ನೂ ಮಹಿಳೆಯರನ್ನೂ ಅಪಹರಿಸಿ ಕಾರ್ಯಕರ್ತರಾಗಿ ತರಬೇತಿ ನೀಡುತ್ತೀರೆಂದು ಹೇಳಲಾಗುತ್ತದೆ?'.

'ಅದು ಸಂಪೂರ್ಣ ಸುಳ್ಳು. ಇಲ್ಲಿ ಮಕ್ಕಳನ್ನು ನನಗೆ ತೋರಿಸಿ! ಇವರು ಎಲ್ಲರೂ ಸ್ವಯಂಸೇವಕರು.